ಶ್ರೀ ಪಂಪಾಪತಿ.—ಮುಂದಿನ ವರ್ಷದಲ್ಲಿ ಪ್ರಯತ್ನ ಮಾಡುತ್ತೀರಾ ? ಎಷ್ಟು ಮನೆಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ತಮ್ಮನ್ನು ಕೇಳಿಯೇ ಮಾಡೋಣ. ನಗರ ಸಭೆಯು ನಿಮ್ಮ ಪಕ್ಷದ ಪ್ರಭಾವದಲ್ಲಿದೆ. ನಗರಸಭೆಯವರು ಇನ್ನೂರು ಸೈಟು ಕೊಡುವುದಾದರೆ ನಾಳೆಯೇ ಯೋಜನೆ ಹಾಕಿಕೊಳ್ಳುತ್ತೇವೆ. ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿ, ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಪಂಪಾಪತಿ.—ನಗರಸಭೆ ನಮ್ಮ ಪಕ್ಷದ ಅಧೀನದಲ್ಲಿದ್ದರೂ ಕೂಡ ನಗರಸಭೆಯಲ್ಲಿ ಜಮೀನು ಇಲ್ಲ. ನಗರಾಭಿವೃದ್ಧಿ ಮಂಡಲಿಯು ತಮ್ಮ ಪಕ್ಷದ ಆಡಳಿತದಲ್ಲಿದ್ದು ಸೈಟು ವಿತರಣೆ ಮಾಡುವುದಕ್ಕೆ ಈಗ ರೆಡಿ ಇದೆ. ತಾವು ಗೃಹನಿರ್ಮಾಣ ಮಂಡಲಿಗೆ ಪತ್ರ ಬರೆದು ಕೊಡುವುದಾದರೆ ಇಪತ್ತು ಸುಮಾರು ೫೦ ಎಕರೆ ಜಮೀನು ಸಿಕ್ಕುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈಗಾಗಲೇ ಸಿ.ಐ.ಟಿ.ಬಿ. ಅವರಿಗೆ ೨೫ ಪರ್ಸೆಂಟ್‌ನಷ್ಟು ಪ್ರದೇಶವನ್ನು ಗೃಹನಿರ್ಮಾಣ ಮಂಡಲಿಯವರಿಗೆ ಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ. ಅವರು ೨೫ ಪರ್ಸೆಂಟ್ ಸೈಟ್ ಕೊಟ್ಟರೆ, ಗೃಹನಿರ್ಮಾಣ ಮಂಡಲಿಯವರು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ.

ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆ

೭೯ (೧೯೪) ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಣೆಬೆನ್ನೂರು ನಗರಕ್ಕೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು ಹರಿಹರ ಫೈಬರ್ಸ್ ಕಂಪನಿಯ ಕಲುಷಿತ ನೀರೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಕಲುಷಿತ ನೀರನ್ನು ತಪ್ಪಿಸುವುದಕ್ಕೋಸ್ಕರ ರಾಣೆಬೆನ್ನೂರು ತಾಲ್ಲೂಕು ಮುದೇನೂರ್ ಹತ್ತಿರದಿಂದ ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆ ಯಾವ ಹಂತದಲ್ಲಿದೆ ;

ಇ) ಸದರಿ ಯೋಜನೆಗೆ ತಗಲುವ ವೆಚ್ಚವೆಷ್ಟು ? ಹಾಗೂ ಸದರಿ ಯೋಜನೆಯನ್ನು ೧೯೬೭-೬೮ರ ಆಯವ್ಯಯ ಪಟ್ಟಿಯಲ್ಲಿ ಸೇರಿಸಲಾಗಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಯೋಜನೆಗೆ ಸಂಬಂಧಿಸಿದ ಅಂದಾಜು ಮತ್ತು ನಕ್ಷೆಯನ್ನು ಸಿದ್ಧಪಡಿಸುತ್ತಿದೆ.

ಇ) ಅಂದಾಜು ವೆಚ್ಚ ೪೦೬.೫೧ ಲಕ್ಷ ರೂ.ಗಳು ೧೯೬೭-೬೮ರ ಆಯವ್ಯಯ ಪಟ್ಟಿಯಲ್ಲಿ ಸೇರಿಸಿಲ್ಲ.

ಇಲ್ಲಿ ಎರಡನೇ ಪ್ರಶ್ನೆ (ಆ) ಗೆ ''ಸಿದ್ಧಪಡಿಸುತ್ತಿದೆ'' ಎಂದು ಉತ್ತರದಲ್ಲಿದೆ. ಅದನ್ನು ''ಸಿದ್ಧಪಡಿಸಿದೆ'' ಎಂದೂ, ಮೂನೇ ಪ್ರಶ್ನೆ (ಇ)ಗೆ. ''ಆಯವ್ಯಯ ಪಟ್ಟಿಯಲ್ಲಿ ಸೇರಿಸಿಲ್ಲ'' ಎಂದಿದೆ, ಇದು ''ಸೇರಿಸಲು ಪ್ರಯತ್ನಿಸಲಾಗುವುದು'' ಎಂದು ತಿದ್ದುಪಡಿಯಾಗಬೇಕು.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಣೆಬೆನ್ನೂರು ನಗರಕ್ಕೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು, ಹರಿಹರ ಪಾಲಿಫೈಬರ್ ಕಂಪನಿಯ ಕಲುಷಿತ ನೀರು ಎಂಬುದು ಸರಕಾರದ ಗಮನಕ್ಕೆ ಬಂದಿಲ್ಲ ಎಂಬ ಉತ್ತರ ಕೇಳಿ ಬಹಳ ಸಂತೋಷ ಆಯಿತು. ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಯೋಜನೆಯ ನಕ್ಷೆ ಮತ್ತು ಅಂದಾಜು ತಯ್ಯಾರಾಗಿದೆ ಎಂಬ ವಿಚಾರ ಕೇಳಿದೆ, ೪೦೬.೫೧ ಲಕ್ಷ ರೂಪಾಯಿಗಳ ಅಂದಾಜು ಮತ್ತು ನಕ್ಷೆ ತಯಾರಾಗಿದೆ ಎಂಬುದನ್ನು ಕೇಳಿ

ಸಹಿತ ನನಗೆ ಬಹಳ ಸಂತೋಷವಾಗಿದೆ. ಇದನ್ನು ೧೯೮೭-೮೮ರ ಆಯವ್ಯಯ ಪಟ್ಟಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ, ಇದರಿಂದ ನನಗೆ ಬಹಳ ವಿಷಾದವಾಗಿದೆ. ಬರೇ ಪ್ರಯತ್ನ ಮಾಡುವುದು ಬೇಡ. ಮಾನ್ಯ ಸಚಿವರು ರಾಣೆಬೆನ್ನೂರು ನಗರಕ್ಕೆ ಬಂದಾಗ ಅಲ್ಲಿಯ ಜನರಿಗೆ ಒಂದು ಆಶ್ವಾಸನೆಯ ಮಾತನ್ನು ಕೊಟ್ಟು ಬಂದಿದ್ದಾರೆ. ಇಂತಹ ಕಲುಷಿತ ನೀರನ್ನು ಸುಮಾರು ೮೦ ಸಾವಿರ ಜನರು ಕಳೆದ ೨೦ ವರ್ಷಗಳಿಂದ ಕುಡಿಯುತ್ತಿದ್ದಾರೆ. ಆದುದರಿಂದ ದಯವಿಟ್ಟು ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಇದನ್ನು ಸೇರಿಸಿ ಜನತೆಗೆ ಏನು ಒಂದು ತೊಂದರೆ ಇದೆ ಅದನ್ನು ನಿವಾರಣೆ ಮಾಡಬೇಕೆಂದು ತಮ್ಮ ಮುಖಾಂತರ ಕಳಕಳಿಯಿಂದ ಸರಕಾರವನ್ನು ಒತ್ತಾಯಪಡಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಪ್ರಯತ್ನ ಮಾಡುತ್ತೇನೆ, ಇಷ್ಟು ಮಾತ್ರ ನಾನು ಹೇಳಬಲ್ಲೆ. ಇದಕ್ಕೆ ನಾಲ್ಕು ಕೋಟಿಗಿಂತಲೂ ಜಾಸ್ತಿ ಹಣ ಖರ್ಚಾಗುವುದಿದೆ. ಈಗಿರುವ ಅಂದಾಜಿನ ಪ್ರಕಾರ ನಾಲ್ಕು ಕೋಟಿ ಆಗುತ್ತದೆ. ಹಣದ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಹಣ ಸಿಗತಕ್ಕಂಥ ಸನ್ನಿವೇಶ ಇದ್ದರೆ ಈಗಿನ ಆಯವ್ಯಯ ಪಟ್ಟಿಯಲ್ಲೇ ಇದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್.—ಅಧ್ಯಕ್ಷರೇ, ಈ ೧೦೬ ಲಕ್ಷ ರೂಪಾಯಿಗಳನ್ನು ಒಂದೇ ವರ್ಷದಲ್ಲಿ ಖರ್ಚು ಮಾಡಬೇಕಾದ ಪರಿಸ್ಥಿತಿ ಏನೂ ಬರುವುದಿಲ್ಲ. ಈ ವರ್ಷ ಪ್ರಾರಂಭ ಮಾಡಲಿ, ಅಲ್ಪಸ್ವಲ್ಪ ಹಣ ಕೊಟ್ಟು ಅಂದರೆ, ೪ ಲಕ್ಷ, ೧೦ ಲಕ್ಷ ಕೊಟ್ಟು ಪ್ರಾರಂಭ ಮಾಡಿದರೆ, ಮುಂದಿನ ವರ್ಷ, ಅದರ ಮುಂದಿನ ವರ್ಷ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದಾಗುತ್ತದೆ ಎಂಬ ದೃಷ್ಟಿಯಿಂದ, ತಮ್ಮ ಮುಖೇನ, ಬಹಳ ಕಳಕಳಿಯಿಂದ, ಒತ್ತಾಯಪೂರ್ವಕವಾಗಿ, ಈ ವರ್ಷದ ಆಯವ್ಯಯ ಪಟ್ಟಿಯಲ್ಲೇ ಇದನ್ನು ಸೇರಿಸಿ, ಕೆಲವೊಂದು ಹಣವನ್ನಾದರೂ ತೆಗೆದಿಟ್ಟು ಕೆಲಸ ಪ್ರಾರಂಭ ಮಾಡಬೇಕೆಂದು ಪುನಃ ಪುನಃ ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸುಳ್ಳು ಆಶ್ವಾಸನೆ ಅಂದರೆ ಸತ್ಯಕ್ಕೆ ದೂರವಾದ ಆಶ್ವಾಸನೆ ಕೊಡುವುದಕ್ಕೆ ನನಗೆ ಇಷ್ಟ ಇಲ್ಲ. ಪ್ರಾಗ್ಮಾಟಿಕ್ ಆಗಿ ಇದನ್ನು ನೋಡಬೇಕು. ಸನ್ಮಾನ್ಯ ಅಧ್ಯಕ್ಷರೇ, ಒಟ್ಟು ನೀರು ಪೂರೈಕೆ ಯೋಜನೆಗಳಿಗಾಗಿ ೧೯೮೭-೮೮ರಲ್ಲಿ ಇಷ್ಟು ಕೋಟಿ ಹಣ ಎಂದು ನಿಗದಿ ಮಾಡುತ್ತಾರೆ. ಈ ಒಂದು ನಿಗದಿಯಾದ ಹಣದ ವ್ಯಾಪ್ತಿಯಲ್ಲಿ ಇದನ್ನು ಸೇರಿಸಿಕೊಳ್ಳುವುದಕ್ಕೆ ಆಗುತ್ತದೋ ಇಲ್ಲವೋ ಎಂಬುದನ್ನು ನೋಡಿಕೊಂಡು, ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೇನೆ. ಇಷ್ಟನ್ನು ಬಿಟ್ಟರೆ, ಜಾಸ್ತಿ ಹೇಳಿದರೆ ನಾನು ಮಾತಿಗೆ ತಪ್ಪಿದಂತೆ ನಡೆದುಕೊಂಡಹಾಗೆ ಆಗುತ್ತದೆಂಬ ತೊಂದರೆ ನನಗೆ ಇದೆ. ಆದುದರಿಂದ ಇಷ್ಟನ್ನು ಹೇಳಿದ್ದೇನೆ. ಪ್ರಯತ್ನ ಮಾಡುತ್ತೇನೆ, ಸಹಾನುಭೂತಿಯಿಂದ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಈಗ ಆಬ್ಸೆಂಟ್ ಇದ್ದವರನ್ನು ಮತ್ತೊಮ್ಮೆ ಕರೆಯುತ್ತೇನೆ.

ಚಂದ್ರಶೇಖರ ಮಾವಜಿ.— ಆಬ್ಸೆಂಟ್.

ಎ. ಎಂ. ಹಿಂದಸಗೇರಿ.— ಆಬ್ಸೆಂಟ್.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಸರಕಾರಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ವಿಳಂಬ

೬೪ (೨೯೪) ಶ್ರೀ ಚಂದ್ರಶೇಖರ ಮಾವಜಿ (ಪರಸಗಡ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉಪವಿಭಾಗ ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಯಂತಹ, ಜನಸಾಮಾನ್ಯರಿಗೆ ಹೆಚ್ಚು ಕಾರ್ಯಾಲಯವಿದ್ದು ಸರಕಾರದ ವಿವಿಧ ಯೋಜನೆಗಳಾದ ಎನ್. ಆರ್. ಡಬ್ಲ್ಯೂ. ಎಸ್., ಎ. ಆರ್. ಡಬ್ಲ್ಯೂ. ಎಸ್., ಸಣ್ಣ ನೀರು ಸರಬರಾಜು, ಕೊರೆದ ಬಾವಿಗಳನ್ನು ಹೊಸುವುದು ಮುಂತಾದುವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ವಿಳಂಬದ ಬಗ್ಗೆ ಸರಕಾರದವ್ವರ ಗಮನಕ್ಕೆ ಬಂದಿದೆಯೆ?